


ಅವರಿಬ್ಬರೂ ಹೆಣ್ಣುಮಕ್ಕಳನ್ನು ಗೋಳು ಹೊಯ್ದುಕೊಳ್ಳುವುದು ಅಜ್ಜನಿಗೆ ಆಗಿಬರದ್ದು. ಅದರಲ್ಲೂ ಮೀನಾಕ್ಷಿಯನ್ನು ಕೆಣಕಿ ಮಾತಾಡಿದಾಗೆಲ್ಲ ಅಜ್ಜ 'ಲೇ ಹುಡ್ರಾ ಆಕೆನ್ಯಾಕೆ ಗೋಳಾಡಿಸ್ತಿರೋ ಪಾಪುದ್ದು ಕಣ್ರೋ, ಬಡವರ ಮಕ್ಳು ಅಂದರೆ ನಿಮಗೆ ಅಗ್ಗ ಅಲಾಕು, ಅಲ್ವೇನ್ರೋ' ಅನ್ನಲು ಜಯಂತ 'ಓ ಬಿಡಜ್ಜ ನಾವೇನು ಅವಳನ್ನ ತಿಂದು ಬಿಡ್ತೀವಾ ಏನೋ ಒಂಚೂರು ಹಿಂಗೇ....' ಅಂತ ವಣ ರಾಗ ತೆಗೀತಿದ್ದ. ಅದಕ್ಕೆ ಶೇಕ್ರಿಯ ಹಿಮ್ಮೇಳ. ಶೇಕ್ರಿಯ ರಾಶಿ ಜಯಂತನಷ್ಟು ಅಲ್ಲ. ಜಯಂತನದ್ದು ಫಸಲಿನ ಕೊಯ್ಲಿಗೆ ಏನಿಲ್ಲವೆಂದರೂ ತಿಂಗಳ ಬಾಬ್ತು. ಶೇಕ್ರಿಯದ್ದು ವಾರದ ಕಮತ ಅಷ್ಟೇ. ಮೀನಾಕ್ಷಿ ಸುಲಿಯಲು ಬರುತ್ತಾಳೆ ಅಂತಲೇ ಜಯಂತ ಅವಸರ ಮಾಡುತ್ತಿರಲಿಲ್ಲ. ಗೌಡ್ರು ಬಂದಾಗ ಒಂಚೂರು ಜೋರು ಮಾಡಿದವನಂತೆ ನಟನೆ ಮಾಡುತ್ತಿದ್ದ. ಬಸಜ್ಜ ಇದ ಗಮನಿಸದೇ ಇರುತ್ತಿರಲಿಲ್ಲ. 'ಎಲಾ ಪೋಕ್ರಿ ಈ ಮೀನಾಕ್ಷಿಗಾಗಿಯೇ ಇವನ ರಂಗಿನಾಟ. ಪಾಪದ ಹುಡುಗಿನ ಏನು ಮಾಡ್ತಾನೋ ಏನೋ. ರೊಕ್ಕದ ಅಸಾಮಿ, ರೊಕ್ಕ ಏನು ಬೇಕಾದರೂ ಕೊಳ್ಳುತ್ತೆ, ಏನು ಬೇಕಾದರೂ ಮಾಡುತ್ತೆ' ಅಂತ ಮನದೊಳಗೇ ನೊಂದುಕೊಳ್ಳುತ್ತಿತ್ತು.

ಶೇಕ್ರಿಯ ಮನೆ ಅಡಕೆ ಸುಲಿಗೆ ವಾರದ್ದಾದರೂ ಅವನಿಗೆ ಮೀನಾಕ್ಷಿಯ ಸಮೀಪವೇ ಒಂದು ರಮ್ಯ ಭಾವವನ್ನು ಮೂಡಿಸುತ್ತಿತ್ತು. ಮೊದಲೇ ಸಾಹಿತ್ಯವನ್ನು ಡಿಗ್ರಿಯಲ್ಲಿ ಮೇಜರಾಗಿ ಓದಿಕೊಂಡವನು. ಅಡಕೆ ಸುಗ್ಗಿ ಬಂತೆಂದರೆ ಅವನಲ್ಲಿ ಬಣ್ಣ ಬಣ್ಣದ